9

# "ಎಲ್ಲವನ್ನು ಕರ್ತನ ನಾಮದಲ್ಲಿ ಮಾಡಿರಿ''

ಪ್ರತಿ ತಿಂಗಳು, ಕಾರಿನ ವಿಮೆಗೆ ನಮ್ಮ ಬ್ಯಾಂಕಿನ ಖಾತೆಯಿಂದ ಚೆಕ್ಕನ್ನು ಕಳಿಸಲಾಗುತ್ತದೆ. ನಾನು ಕಾರಿನ ಕಂಪನಿಗೆ ಚೆಕ್ಕನ್ನು ಬರೆಯುವದಿಲ್ಲ. ಆ ಹಣವನ್ನು ಕಟ್ಟುವ ಸಮಯವನ್ನು ಬ್ಯಾಂಕಿನವರು ತಿಳಿಸುವದಿಲ್ಲ. ಹಣ ಸಂದಾಯವಾಗಿರುವದಕ್ಕೆ ಯಾವುದೇ ಹಿಂಬರಹವನ್ನು ಬ್ಯಾಂಕು ನೀಡುವದಿಲ್ಲ. ಹೇಗೂ ಈ ಹಣದ ವ್ಯವಹಾರದಲ್ಲಿ ಯಾವುದೇ ಅವ್ಯವಹರವು ಇರುವದಿಲ್ಲ. ಯಾಕಂದರೆ, ಬ್ಯಾಂಕಿನ ಪತ್ರದಲ್ಲಿ ನನ್ನ ಸಹಿಯು ಇರುವದರಿಂದ ನನ್ನ ಖಾತೆಯಿಂದ ಬ್ಯಾಂಕಿನವರು ಕಾರಿನ ಕಂಪನಿಗೆ ನನ್ನ ಹಣವನ್ನು ಸಂದಾಯ ಮಾಡುತ್ತಾರೆ. ನಾನು ಅಧಿಕೃತವಾದ ಸಹಿಯನ್ನು ಬ್ಯಾಂಕಿನಲ್ಲಿ ಮಾಡಿರುವದರಿಂದ ಇದು ಸಾಧ್ಯ. ಪತ್ರದಲ್ಲಿ ನನ್ನ ಅಧಿಕೃತ ಸಹಿ ಇಲ್ಲದೆ ಹೋದರೆ, ನನ್ನ ಖಾತೆಯಿಂದ ಹಣವನ್ನು ತೆಗೆದು ಕಾರಿನ ಕಂಪನಿಗೆ ನೀಡಲು ಬ್ಯಾಂಕಿಗೆ ಯಾವ ಅಧಿಕಾರವು ಇರುವದಿಲ್ಲ. ಬೇರೆಯವರಿಗೆ ನನ್ನ ಹೆಸರಿನಲ್ಲಿ ಹಣವನ್ನು ನೀಡುವರು, ಅದು ನಾನು ಅವರಿಗೆ ನೀಡಿರುವ ಅಧಿಕಾರದಿಂದ, ನನ್ನ ಅಧಿಕಾರದಿಂದ *ಮಾತ್ರ.*

ಕ್ರೈಸ್ತರ ಜೀವಿತಕ್ಕೂ ಸಹ ಯೇಸುವಿನ ಅಧಿಕಾರವೂ ಇದೇ ರೀತಿ ಇರುತ್ತದೆ. ನಾವು ನಂಬುವದಕ್ಕೆಲ್ಲ ಇದು ಅನ್ವಯಿಸುತ್ತದೆ. ಹೊಸ ಒಡಂಬಡಿಕೆಯಲ್ಲಿ "ಯೇಸುವಿನ ನಾಮದಲ್ಲಿ" ಎಲ್ಲವೂ ಕಾರ್ಯರೂಪಕ್ಕೆ ಬರುತ್ತದೆ.

## "ಕರ್ತನ ಹೆಸರಿನಲ್ಲಿ'' ರಕ್ಷಣೆ

ಕ್ರೈಸ್ತನ ನಂಬಿಕೆಗೂ ಮತ್ತು ಕ್ರಿಯೆಗಳಿಗೂ ಯೇಸುವಿನ ಅಧಿಕಾರವೇ ಮೂಲವಾಗಿ ರುತ್ತದೆ. ಆತನು ಪರಲೋಕಕ್ಕೆ ಏರಿ ಹೋಗುವ ಮೊದಲು, ಯೇಸು ಹೇಳಿದ್ದು, "ಪರಲೋಕ ಭೂಲೋಕಗಳಲ್ಲಿಯೂ ಎಲ್ಲಾ ಅಧಿಕಾರ ನನಗೆ ನೀಡಲಾಗಿದೆ'' (ಮತ್ತಾಯ 28:18). ಜನರು ಆತನ ಹೆಸರಿನಲ್ಲಿ ರಕ್ಷಣೆ ಹೊಂದುವರು ಎಂಬುದಕ್ಕೆ ಈ ಬೋಧನೆಯು ಅವಶ್ಯವಿತ್ತು ಎಂದು ಶಿಷ್ಯರು ಅರಿತಿದ್ದರು. ಯೇಸುವಿನಲ್ಲಿರುವ ನಿತ್ಯ ಜೀವವನ್ನು, ಆತನ ನಾಮದಲ್ಲಿರುವ ಅಧಿಕಾರದಿಂದ ಪಡೆಯ ಬಹುದು ಎಂದು ಉಪದೇಶಿಸಿದರು.

ಯೇಸು ಕ್ರಿಸ್ತನು ಅಧಿಕಾರದೊಂದಿಗೆ ಸಲಹೆಗಳನ್ನು ಹೊಂದಿದ್ದನು. ಈ ಅಧಿಕಾರಕ್ಕೆ ಆತನ ಶಿಷ್ಯರು ಸ್ಪಂದಿಸಿದರು:

> ಆಗ ಯೇಸು ಹತ್ತಿರಕ್ಕೆ ಬಂದು - ಪರಲೋಕದಲ್ಲಿಯೂ ಭೂಲೋಕದಲ್ಲಿಯೂ ಎಲ್ಲಾ ಅಧಿಕಾರವು ನನಗೆ ಕೊಡಲ್ಪಟ್ಟಿದೆ. ಆದ್ದರಿಂದ ನೀವು ಹೊರಟುಹೋಗಿ ಎಲ್ಲಾ ದೇಶಗಳ ಜನರನ್ನು ಶಿಷ್ಯರನ್ನಾಗಿ ಮಾಡಿರಿ; ಅವರಿಗೆ ತಂದೆಯ, ಮಗನ ಪವಿತ್ರಾತ್ಮನ ಹೆಸರಿನಲ್ಲಿ *ದೀಕ್ಷಾಸ್ನಾನಮಾಡಿಸಿ ನಾನು ನಿಮಗೆ ಆಜ್ಞಾಪಿಸಿದ್ದನ್ನೆಲ್ಲಾ ಕಪಾಡಿಕೊಳ್ಳುವದಕ್ಕೆ ಅವರಿಗೆ ಉಪದೇಶಮಾಡಿರಿ. ನೋಡಿರಿ,* ನಾನು ಯುಗದ ಸಮಾಪ್ತಿಯವರೆಗೂ ಎಲ್ಲಾ ದಿವಸ ನಿಮ್ಮ ಸಂಗಡ ಇರುತ್ತೇನೆ ಎಂದು ಹೇಳಿದನು (ಮತ್ತಾಯ 28:18-20; ಒತ್ತಿ ಹೇಳಿದ್ದು ನನ್ನು).

"ಆದುದರಿಂದ,'' ಎಂಬ ಪದದ ಹಿನ್ನೆಲೆಯಲ್ಲಿ, ಯೇಸುವಿಗೆ ಎಲ್ಲಾ ಅಧಿಕಾರವು ನೀಡಲ್ಪಟ್ಟಿತು ಎಂಬುದು ದೃಢಪಟ್ಟಿರುತ್ತದೆ. ಈ ಅಧಿಕಾರದಲ್ಲಿ *ಶಿಷ್ಯತ್ವವು ಒಳಗೊಂಡಿತ್ತು.* (ಗ್ರೀಕ್ ಕ್ರಿಯಾಪದದ ಅರ್ಥದ ವ್ಯಾಖ್ಯಾನ) ಇತರ ಮೂರು ಕ್ರಿಯಾಪದಗಳ ಮೂಲಕ ಶಿಷ್ಯರನ್ನು

ಮಾಡುವ ವಿಷಯವನ್ನು ವಿವರಿಸಲಾಗಿದೆ. ಯೇಸುವಿನ ಶಿಷ್ಯರು ಹೊರಟು ಹೋಗಿ ತಂದೆ, ಮಗ ಪರಿಶುದ್ಧಾತ್ಮನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿ; ಅಧಿಕಾರ ಹೊಂದಿದ ಯೇಸುವಿನ ಎಲ್ಲಾ ವಿಷಯಗಳನ್ನು ಕಾಪಾಡಿಕೊಳ್ಳುವದಕ್ಕೆ *ಉಪದೇಶ*ಮಾಡಬೇಕಿತ್ತು. ಆತನ ಅಧಿಕಾರದ ಮೂಲಕ ವಾಗಿ, ಶಿಷ್ಯರನ್ನು ಮಾಡುವದು, ದೀಕ್ಷಾಸ್ನಾನ ಮಾಡಿಸುವುದು. ಅವರು ಬೋಧನೆಗಳು ಅವರು ಮಾಡಬೇಕಾಗಿದ್ದ ಕರ್ತವ್ಯಗಳಾಗಿದ್ದವು.[1]

ಯೇಸುವಿನ ಅಧಿಕಾರ ಮತ್ತು ಆತನು ನೀಡುವ ರಕ್ಷಣೆಯ ಕುರಿತಾದ ವಿಷಯ ಗಳು ಹೊಸ ಒಡಂಬಡಿಕೆಯ ಇತರೆ ಪುಸ್ತಕಗಳಲ್ಲೂ ನೋಡುತ್ತೇವೆ. ಆತನು ಶಿಲುಬೆಗೆ ಹಾಕಲ್ಪಟ್ಟ ಹಿಂದಿನ ರಾತ್ರಿ, ಆತನು ತನ್ನ ಶಿಷ್ಯರಿಗೆ ದೇವರ ಬಳಿಗೆ ಹೋಗಲು ಆತನೋಬ್ಬನೇ ಮಾರ್ಗ ಎಂದು ತಿಳಿಸಿದನು: "ನಾನೇ ಮಾರ್ಗವೂ ಸತ್ಯವೂ ಜೀವವೂ ಆಗಿದ್ದೇನೆ; ನನ್ನ ಹೊರತು ಯಾರೂ ತಂದೆಯ ಬಳಿಗೆ ಬರಲಾರರು" (ಯೋಹಾನ 14:6). ಪೌಲನು ಮತ್ತು ಅವನ ಜೊತೆ ಕೆಲಸದವರು ಕ್ರಿಸ್ತನ ರಾಯಬಾರಿಗಳು ಎಂದು ತಿಳಿಸಿ, ದೇವರೇ ನಮ್ಮ ಮೂಲಕ ಬುದ್ಧಿ ಹೇಳುವ ಹಾಗಾಯಿತು. "ದೇವರೊಂದಿಗೆ ಸಮಾಧಾನವಾಗಿರೆಂದು ಕ್ರಿಸ್ತನ ಹೆಸರಿನಲ್ಲಿ ನಿಮ್ಮನ್ನು ಬೇಡಿಕೊಳ್ಳುತ್ತೇವೆ" (2 ಕೊರಿಂಥ 5:20).

ಬಹುಶಃ ಅಪೊಸ್ತಲರಕೃತ್ಯಗಳು 4ರಲ್ಲಿ, ಕ್ರಿಸ್ತನ ಅಧಿಕಾರದ ಕುರಿತ ಸಂಪೂರ್ಣ ಚಿತ್ರಣವಿರಬಹುದು, ಅಲ್ಲಿ ಪೇತ್ರನು ಹುಟ್ಟು ಕುಂಟನನ್ನು ಮತ್ತು ಯೇಸುವಿನ ಬೋಧನೆಯನ್ನು ಸಮರ್ಥಿಸಿಕೊಂಡನು.

> ಪೇತ್ರನು ಪವಿತ್ರಾತ್ಮಭರಿತನಾಗಿ ಅವರಿಗೆ - ಜನರ ಅಧಿಕಾರಿಗಳೇ, ಹಿರಿಯರೇ, ಒಬ್ಬ ಅಂಗಹೀನನಿಗೆ ಆದ ಉಪಕಾರದ ವಿಷಯದಲ್ಲಿ ಅವನಿಗೆ ಯಾತರಿಂದ ನೆಟ್ಟಗಾಯಿತು ಎಂಬದಾಗಿ ನಮ್ಮನ್ನು ಈ ಹೊತ್ತು ವಿಚಾರಣೆ ಮಾಡುವದಾದರೆ ನಿಮ್ಮೆಲ್ಲರಿಗೂ ಇಸ್ರಾಯೇಲ್ ಜನರೆಲ್ಲರಿಗೂ ತಿಳಿಯಬೇಕಾದದ್ದೇನೆಂದರೆ - ನೀವು ಶಿಲುಬೆಗೆ ಹಾಕಿಸಿದಂಥ ಮತ್ತು ದೇವರು ಸತ್ತವರೊಳಗಿಂದ ಎಬ್ಬಿಸಿದಂಥ ನಜರೇತಿನ ಯೇಸು ಕ್ರಿಸನ ಹೆಸರಿನಿಂದಲೇ ಈ ಮನುಷ್ಯನು ನಿಮ್ಮೆದುರಿನಲ್ಲಿ ಸ್ವಸ್ಥನಾಗಿ ನಿಂತಿರುತ್ತಾನೆ. ಮನೆಕಟ್ಟುವವರಾದ ನೀವು ಹೀನೈಸಿದ ಕಲ್ಲು ಆತನು; ಆತನೇ ಮುಖ್ಯವಾದ ಮೂಲೆಗಲ್ಲಾದನು. *ಬರಬೇಕಾದ ರಕ್ಷಣೆಯು ಇನ್ನಾರಲ್ಲಿಯೂ ಸಿಕ್ಕುವದಿಲ್ಲ; ಆ ಹೆಸರಿನಿಂದಲೇ ಹೊರತು ಆಕಾಶದ ಕೆಳಗೆ ಮನುಷ್ಯರೊಳಗೆ ಕೊಡಲ್ಪಟ್ಟಿರುವ ಬೇರೆ ಯಾವ ಹೆಸರಿನಿಂದಲೂ ನಮಗೆ ರಕ್ಷಣೆಯಾಗುವದಿಲ್ಲ ಎಂದು ಹೇಳಿದನು* (ಅಪೊಸ್ತಲರಕೃತ್ಯಗಳು 4:8-12; ಒತ್ತಿ ಹೇಳಿದ್ದು ನನ್ನದು).

ದೇವಾಲಯದ ದ್ವಾರದ ಬಳಿಯಲ್ಲಿ, ಪೇತ್ರನು ಹುಟ್ಟು ಕುಂಟನನ್ನು ಸ್ವಸ್ಥಮಾಡಿದನು (ಅಪೊಸ್ತಲರಕೃತ್ಯಗಳು 3:1-10) ಯೇಸು ಕ್ರಿಸ್ತನೇ ಪೇತ್ರನಿಗೆ ಆ ಅಧಿಕಾರವನ್ನು ನೀಡಿದ್ದನು. ಅವನು ಬೋಧಿಸುತ್ತಿದ ರಕ್ಷಣೆಗೆ ಈ ಸ್ವಸ್ಥತೆಯು ಸಾಕ್ಷಿಯಾಗಿತ್ತು (ಅಪೊಸ್ತಲರಕೃತ್ಯಗಳು 3:11-26). ಅಪೊಸ್ತಲರಕೃತ್ಯಗಳು 4:1-22ರಲ್ಲಿ ಪೇತ್ರನ ನ್ಯಾಯವಿಚಾರಣೆಯು, ಈ ಸ್ವಸ್ಥತೆಯ ಕುರಿತಾಗಿ ಇರದೆ ಯೇಸುವಿನ ಅಧಿಕಾರದ ಪ್ರಶ್ನೆಯಾಗಿತ್ತು. ಇಲ್ಲಿ ಮತ್ತಾಯ 28:18-20ರ ತತ್ವವು ಕಾರ್ಯನಿರತವಾಗಿದೆ. ಅಪೊಸ್ತಲರು ತಾವು ಉಪದೇಶಿಸಿದ ರಕ್ಷಣೆಯು, ಅವರಿಂದಲೇ ಉಂಟಾದದ್ದಲ್ಲ, ಆದರೆ ಅದನ್ನು ಆತನ ನಾಮದಲ್ಲು - ಅಥವಾ ಕ್ರಿಸ್ತನ - ಅಧಿಕಾರದಲ್ಲೂ, ಮಾಡಿದರು.

ಅಪೊಸ್ತಲರಕೃತ್ಯಗಳು 2ರಲ್ಲಿ ಪೇತ್ರನ ಸಂದೇಶವನ್ನು ಕೇಳಿದವರಿಗೆ, "ಮಾನಸಾಂತರ ... *ಪಟ್ಟು ಯೇಸು ಕ್ರಿಸ್ತನ ಹೆಸರಿನಲ್ಲಿ* ದೀಕ್ಷಾಸ್ನಾನ ಮಾಡಿಸಿ ಕೊಳ್ಳಿರಿ ಅಂದನು. (ಅಪೋಸ್ತಲರಕೃತ್ಯಗಳು 2:38; ಒತ್ತಿ ಹೇಳಿದ್ದು ನನ್ನದು). ಅಪೊಸ್ತಲರಕೃತ್ಯಗಳು 3ರಲ್ಲಿ ಕುಂಟನು ಸ್ವಸ್ತನಾದಾಗ (ಅಪೋಸ್ತಲಕೃತ್ಯಗಳು 4, 5ರಲ್ಲಿ ವಿವಾದಕ್ಕೆ ಒಳಗಾದ ವಿಷಯ) ಪೇತ್ರನು

ಅವನಿಗೆ *"ನಜರೇತಿನ ಯೇಸುವಿನ ನಾಮದಲ್ಲಿ ಎದ್ದು ನಡೆದಾಡು ಎಂದು ಅಪ್ಪಣೆಮಾಡಿದನು"* (ಅಪೊಸ್ತಲರಕೃತ್ಯಗಳು 3:6; ಒತ್ತಿ ಹೇಳಿದ್ದು ನನ್ನದು). ಪೇತ್ರ ಮತ್ತು ಯೋಹಾನರು ಅಧಿಕಾರದಿಂದ ಮಾಡಿದ ಕಾರ್ಯವನ್ನು ಯೆಹೂದ್ಯರು ತಿಳುಕೊಂಡಿದ್ದರು. ಆದುದರಿಂದ ಅವರು, ಅಪೊಸ್ತಲರಿಗೆ, *"ಆ ಯೇಸುವಿನ ಹೆಸರನ್ನು* ಎತ್ತಿ ಹೇಗೂ ಮಾತಾಡಬಾರದು, ಉಪದೇಶ ಮಾಡಲೂ ಬಾರದು ಎಂದು ಅವರಿಗೆ ಖಂಡಿತವಾಗಿ ಅಪ್ಪಣೆಕೊಟ್ಟರು" (ಅಪೊಸ್ತಲರಕೃತ್ಯಗಳು 4:18; ಒತ್ತಿ ಹೇಳಿದ್ದು ನನ್ನದು 5:40 ನೋಡಿರಿ). ಹಿಂಸೆಯ ಸಮಯದಲ್ಲಿ ಶಿಷ್ಯರು ಪ್ರಾರ್ಥಿಸುವಾಗ, "*ನಿನ್ನ ಪವಿತ್ರ ಸೇವಕನಾದ ಯೇಸುವಿನ* ಹೆಸರಿನ ಮೂಲಕವಾಗಿ ರೋಗ ಪರಿಹಾರವೂ ಸೂಚಕ ಕಾರ್ಯಗಳೂ ಅದ್ಭುತ ಕಾರ್ಯಗಳೂ ಉಂಟಾಗಲಿ ಎಂದರು" (ಅಪೊಸ್ತಲರಕೃತ್ಯಗಳು 4:30; ಒತ್ತಿ ಹೇಳಿದ್ದು ನನ್ನದು).

ಚಿಕ್ಕದಾದ ಸಭೆಯು ಬೆಳೆದು ರೋಮಾ ಸಾಮ್ರಾಜ್ಯದಲ್ಲಿ ಹಬ್ಬುವಾಗ, ಯೇಸುವಿನ ಅಧಿಕಾರವು ಮುಂದುವರಿಯಿತು. ಅಪೊಸ್ತಲರಕೃತ್ಯಗಳು 8ರಲ್ಲಿ, ಫಿಲಿಪ್ಪನು ಸಮಯರ್ಾದವರಿಗೆ ಪ್ರಸಂಗಿಸಿದಾಗ ಪೇತ್ರ ಮತ್ತು ಅಪೊಸ್ತಲರು ಪಂಚಾಶತ್ತಮದ ದಿನದಂದು ಮಾಡಿದ ಕಾರ್ಯಗಳನ್ನೆ ಮಾಡಿದನು, "*ಕರ್ತನಾದ ಯೇಸುವಿನ ನಾಮದಲ್ಲಿ* ದೀಕ್ಷಾಸ್ನಾನ ಮಾಡಿಸಿಕೊಳ್ಳಿರಿ" ಎಂದು ತಿಳಿಸಿದನು (ಅಪೊಸ್ತಲರಕೃತ್ಯ ಗಳು 8:16; ಒತ್ತಿ ಹೇಳಿದ್ದು ನನ್ನದು). ಅಪೊಸ್ತಲರಕೃತ್ಯಗಳು 9ರಲ್ಲಿ, ಬಾರ್ನಬನು ಯೆರುಸಲೇಮಿನ ಸಭಾಮಂದಿರದಲ್ಲಿ ಸೌಲನ ಪರವಾಗಿ ಮಾತನಾಡುವಾಗ, ಸೌಲನು, "*ಯೇಸುವಿನ ನಾಮದಲ್ಲಿ* ಧೈರ್ಯದಿಂದ" ಮಾತನಾಡಿರುವದರಿಂದ, ಅವನ ಮೇಲೆ ವಿಶ್ವಾಸವಿಡಬಹುದು ಎಂದು ಸಮರ್ಥಿಸಿಕೊಂಡನು (ಅಪೊಸ್ತಲರಕೃತ್ಯಗಳು 9:27; ಒತ್ತಿ ಹೇಳಿದ್ದು ನನ್ನದು).

ಯೇಸುವಿನ ಅಧಿಕಾರದ ಪ್ರಶ್ನೆಯು ಇನ್ನೂ ವಿಸ್ತರಣೆಗೊಂಡಿತ್ತು ಅಪೊಸ್ತಲರಕೃತ್ಯಗಳು 10 ಮತ್ತು 11, ಅನ್ಯರು ಪ್ರಥಮವಾಗಿ ಸುವಾರ್ತೆಗೆ ಒಳಗಾದಾಗ, ಪೇತ್ರನು ಯಾವ ಅಧಿಕಾರದಿಂದ ಅವರಿಗೆ ವಾಕ್ಯವನ್ನು ಸಾರಿದನು? ಅವನು ಅನ್ಯರ ಜೊತೆ ಬೆರೆಯದ ಯೆಹೂದ್ಯನಾಗಿದ್ದನು, ಮತ್ತು "ಅಶುದ್ಧವಾದದ್ದನ್ನು ತಿಂದವನಲ್ಲ"[2] (ಅಪೊಸ್ತಲರಕೃತ್ಯಗಳು 10:14; ವಚನ 28ನ್ನು ನೋಡಿರಿ). ಕೊರ್ನೇಲಿಯನಂತ ಅನ್ಯನ ಜೊತೆ ಹೇಗೆ ಹೊಂದಾಣಿಕೆ ಮಾಡಲು ಸಾಧ್ಯ? ಪೇತ್ರನು ಮಾಡಿದ ಸಂಗತಿಯ ಕುರಿತಾಗಿ ಯೆರುಸಲೇಮಿನ ಸಭೆಯವರು ಪ್ರಶ್ನಿಸಿದ್ದರು (ಅಪೊಸ್ತಲರಕೃತ್ಯಗಳು 11:1-18). ಅದಕ್ಕೆ ಉತ್ತರವನ್ನು ಅಪೊಸ್ತಲರಕೃತ್ಯಗಳು 10:44-46ರಲ್ಲಿ ನೋಡುತ್ತೇವೆ. ಪರಿಶುದ್ಧ ಆತ್ಮನು ಕೊರ್ನೇಲಿಯನ ಮತ್ತು ಅವನ ಕುಟುಂಬದ ಮೇಲೆಯೂ ಇಳಿದು ಬಂದನು. ನಂತರ ಅವರೂ ಸಹ ಅನ್ಯಭಾಷೆಯಲ್ಲಿ ಮಾತನಾಡಿದರು.[3] ಅಪೊಸ್ತಲರಕೃತ್ಯಗಳು 2ನೇ ಅಧ್ಯಾಯದಲ್ಲಿ ಇದೇ ಸಂಗತಿಯು ನಡೆದಿತ್ತು. ಇದರ ಕಾರ್ಯದ ನಿಮಿತ್ತ ದೇವರು ಅನ್ಯರ ಮಧ್ಯದಲ್ಲಿಯೂ ಕಾರ್ಯಮಾಡುವನು ಎಂದು ನಿರೂಪಿಸಿದ್ದರು. ಈ ಕಾರಣದಿಂದ, ಅವರುಗಳು ಸಹ ದೀಕ್ಷಾಸ್ನಾನ ಹೊಂದಿ ಸಭೆಗೆ ಸೇರುವದರಲ್ಲಿ ಯಾರು ಅಡ್ಡಿಪಡಿಸಬಾರದಿತ್ತು (ವಚನಗಳು 46, 47). "ಆದುದರಿಂದ ಅವರುಗಳು *ಯೇಸುವಿನ ನಾಮದಲ್ಲಿ* ದೀಕ್ಷಾಸ್ನಾನ ಮಾಡಿಸಿಕೊಳ್ಳಬೇಕೆಂದು ಆಜ್ಞಾಪಿಸಿದನು" (ವಚನ 48; ಒತ್ತಿ ಹೇಳಿದ್ದು ನನ್ನದು).

ಯೇಸುವಿನ ಅಧಿಕಾರವನ್ನು ಹೊಂದಿದವನಾಗಿ, ಪೌಲನು ಸವಾರ್ತೆಯನ್ನು ರೋಮಾ ಸಾಮ್ರಾಜ್ಯದ ಅನ್ಯರಿಗೆ ಸಾರಿದನು. ಅದ್ಭುತ ಮತ್ತು ಮಹತ್ಕಾರ್ಯಗಳ ಮೂಲಕ ಅವರನ್ನು ರಕ್ಷಣೆಗೆ ನಡೆಸುತ್ತಿದ್ದನು. ಫಿಲಿಪ್ಪಿಯಲ್ಲಿ ದೆವ್ವಹಿಡಿದ ಹುಡುಗಿಗೆ, "ಅವಳನ್ನು ಬಿಟ್ಟು ಹೋಗು ಎಂದು *ಯೇಸು ಕ್ರಿಸ್ತನ ಹೆಸರಿನಲ್ಲಿ* ಅಪ್ಪಣೆ ಕೊಟ್ಟಿದ್ದನು" (ಅಪೊಸ್ತಲರಕೃತ್ಯಗಳು 16:18; ಒತ್ತಿ ಹೇಳಿದ್ದು ನನ್ನದು). ಅಪೊಸ್ತಲರಕೃತ್ಯಗಳು 19ರಲ್ಲಿ ಯೋಹಾನನ ದೀಕ್ಷಾಸ್ನಾನವನ್ನು ಬೋಧಿಸುವವರನ್ನು ಎದುರಿಸಿದನೇ, ವಿನಃ ಕ್ರಿಸ್ತನ ದೀಕ್ಷಾಸ್ನಾನದವರನಲ್ಲ, ಅದರ ಮುಂದಿನ ಉಪದೇಶದಲ್ಲಿ "ಅವರು *ಕರ್ತನಾದ ಯೇಸುವಿನ ಹೆಸರಿನಲ್ಲಿ* ದೀಕ್ಷಾಸ್ನಾನ

ಮಾಡಿಸಿಕೊಂಡರು'' (ವಚನ 5ಬಿ; ಒತ್ತಿ ಹೇಳಿದ್ದು ನನ್ನದು). ಕೊರಿಂಥ ಸಭೆಯಲ್ಲಿ ಪೌಲನು ವಿಭಜನೆಯ ಕುರಿತು ಬರೆಯುವಾಗ ಅವರು ಪೌಲನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಿರುವದಿಲ್ಲ ಎಂದು ನೆನಪುಮಾಡಿದನು (1 ಕೊರಿಂಥ 1:13). ಅವರಿಗೆ ಅವನು ದೀಕ್ಷಾಸ್ನಾನ ಮಾಡಿಸದೆ ಇದ್ದದ್ದರಿಂದ ಸಂತಸಗೊಂಡನು, ಯಾಕಂದರೆ ಅವರು ಪೌಲನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಿರಲಿಲ್ಲ (1 ಕೊರಿಂಥ 1:14, 15). ಅವರೆಲ್ಲರು ಕ್ರಿಸ್ತನ ಹೆಸರಿನಲ್ಲಿ ದೀಕ್ಷಾಸ್ನಾನ ಮಾಡಿಸಿಕೊಂಡಿದ್ದರು ಎಂದು ಯಾವಾಗಲೂ ನೆನಪು ಮಾಡಬೇಕಿತು. ನಂತರ, ಅವರು ಪಾಪದ ಪ್ರಪಂಚದಿಂದ ಬಿಡುಗಡೆಯಾದದ್ದನ್ನು ನೆನಪು ಮಾಡಬೇಕಿತ್ತು. ಯೇಸುವಿನ ಅಧಿಕಾರಕ್ಕೆ ಅವರು ಮಾಡಿದ ಪ್ರತಿಕ್ರಿಯೆಯನ್ನು ನೆನಪು ಮಾಡಬೇಕಿತ್ತು. "*ಕರ್ತನಾದ ಯೇಸು ಕ್ರಿಸ್ತನ ಹೆಸರಿನಲ್ಲಿಯೂ* ನಮ್ಮ ದೇವರ ಆತ್ಮದಲ್ಲಿಯೂ ತೊಳೆದು ಕೊಂಡಿರಿ, ದೇವಜನರಾದಿರಿ, ನೀತಿವಂತರೆಂಬ ನಿರ್ಣಯವನ್ನೂ ಹೊಂದಿದಿರಿ'' (1 ಕೊರಿಂಥ 6:11; ಒತ್ತಿ ಹೇಳಿದ್ದು ನನ್ನದು).

ವಿಶ್ವಾಸಿಗಳು ಅನಿಸಿಕೊಳ್ಳುವವರು, ಯೇಸುವಿನ ನಾಮದ ಅಧಿಕಾರದ ಹೊರತಾಗಿ, ಕೇಫನ ಹೆಸರನ್ನಾಗಲೀ (ಪೇತ್ರ), ಅಪೊಲ್ಲೋಸನ, ಅಥವಾ ಪೌಲನ ಹೆಸರಿನಲ್ಲಿ ಏನನ್ನೂ ಮಾಡಬಾರದು (ನೋಡಿರಿ 1 ಕೊರಿಂಥ 1:10-13). ಆ ಪ್ರಮುಖರ ಹೆಸರುಗಳು ನಿಷಿದ್ಧವಾಗಿದ್ದವು. ಈ ದಿವಸಗಳಲ್ಲಿ ಕೆಲವರು ಯಾವ ಅಧಿಕಾರದಿಂದ ಮನುಷ್ಯರ ಹೆಸರನ್ನು ಉಪಯೋಗಿಸಿದ್ದರು?

ಆದಿ ಸಭೆಯಲ್ಲಿ, ಯೇಸುವಿನ ಅಧಿಕಾರವೇ ಪ್ರಧಾನವಾಗಿದ್ದು, ಅವರ ಸಕಲ ಕಾರ್ಯಗಳಲ್ಲಿ ಉಪಯೋಗಿಸಲ್ಪಡುತ್ತಿತ್ತು. "ಆತನ ಹೆಸರನ್ನು'' ಹೇಳಿ ಕಾರ್ಯಮಾಡುವಾಗ, ಅವರ ಭಾವನೆಗಳಲ್ಲಿ ಹೆಸರಿನ ನಂಬಿಕೆ ಇರಲಿಲ್ಲ, ಅದರ ಬದಲಾಗಿ, ನನ್ನ ಹೆಸರಿನ ಚಕ್ಕನ್ನು ಬ್ಯಾಂಕಿನವರು ವಾಹನದ ವಿಮೆ ಕಛೇರಿಗೆ ಕಳುಹಿಸುವಂತೆ, ಇದೇ ವಿಧವಾದ ನಿಯಮವನ್ನು ಅಪೊಸ್ತಲರು ಅಳವಡಿಸಿಕೊಂಡಿದ್ದರು. ಪರಲೋಕದಲ್ಲಿ ಮತ್ತು ಭೂಲೋಕದಲ್ಲಿ ಕಟ್ಟುವ ಮತ್ತು ಬಿಚ್ಚುವ ಉಪದೇಶಗಳನ್ನು ಇತರರಿಗೆ ತಿಳಿಸಲು ಅವರು ನೇಮಕಗೊಂಡಿದ್ದರು (ಮತ್ತಾಯ 16:19; 18:18; 28:19, 20). ಅವರ ಎಲ್ಲಾ ಹೇಳಿಕೆಗಳು ಕರ್ತನಿಂದ ಪಡೆದವುಗಳು ಎಂದು ನಿರೂಪಿಸಿದ್ದರು (ಇಬ್ರಿಯ 2:3, 4 ನೋಡಿ), ಆದುದರಿಂದ, ಅವರು ರಕ್ಷಣೆಯ ವಾಗ್ದಾನವನ್ನು ನೀಡಿದರು - ತಮ್ಮ ಅಧಿಕಾರದಿಂದ ಆಗಿರದೆ, ಆತನ ಅಧಿಕಾರದಿಂದಲೇ.

## ಸಭೆಯು "ಕರ್ತನ ಹೆಸರಿನಲ್ಲಿ'' ಕ್ರಿಯಾಶೀಲವಾಗುತ್ತದೆ

ಯೇಸುವಿನ ಅಧಿಕಾರದಿಂದ ಮಾತ್ರ ಜನರಿಗೆ ರಕ್ಷಣೆಯ ವರವು ದೊರೆಯುತ್ತದೆ. ಯೇಸುವಿನ ಅಧಿಕಾರಯುಕ್ತವಾದ ಕರಾರುಗಳಿಂದ ಮಾತ್ರ ರಕ್ಷಣೆ ಹೊಂದಲು ಸಾಧ್ಯವಿದೆ. ಕ್ರೈಸ್ತರು ರಕ್ಷಣೆ ಹೊಂದಿದ ನಂತರ, ಈ ಅಧಿಕಾರವು ಅವರಲ್ಲಿ ಮುಂದುವರಿಯುತ್ತದೆ, ಹೊಸ ಒಡಂಬಡಿಕೆಗಳಲ್ಲಿ ನೇಮಕಗೊಂಡಿರುವ ಸಕಲ ಕ್ರಿಯೆಗಳಲ್ಲಿ "ಯೇಸುವಿನ ನಾಮ'' ಎಂಬ ಭಾಷೆಯು ಮುಂದುವರಿಯುತ್ತದೆ.

ಕೊರಿಂಥವರಲ್ಲಿ ಉಂಟಾಗಿದ್ದ ವಿಭಜನೆಗಳ ಕುರಿತು ಪೌಲನು ಅವರನ್ನು ಗದರಿಸಿದನು. *"ನಮ್ಮ ಕರ್ತನಾದ ಯೇಸು ಕ್ರಿಸ್ತನನಾಮದಲ್ಲಿ''* ಹೊಂದಿಕೆ ಇರಬೇಕು ಎಂದು ಮನವಿಮಾಡಿದನು (1 ಕೊರಿಂಥ 1:10; ಒತ್ತಿ ಹೇಳಿದ್ದು ನನ್ನದು). ಅವರಲ್ಲಿ ತಂದೆಯ ಹೆಂಡತಿಯೊಂದಿಗೆ ಅನೈತಿಕ ಸಂಬಂಧ ಹೊಂದಿದವನನ್ನು ಕುರಿತು ಪೌಲನು, "ಅವನನ್ನು *ನಮ್ಮ ಕರ್ತನಾದ ಯೇಸುವಿನ ನಾಮದಿಂದ* ಅವನನ್ನು ಸೈತಾನನಿಗೆ ಒಪ್ಪಿಸಿ ಬಿಡಬೇಕು'' ಅಂದನು (1 ಕೊರಿಂಥ 5:4; ಒತ್ತಿ ಹೇಳಿದ್ದು ನನ್ನದು). ಎಫೆಸ 5:17-20, ಹಳೆಯ ಪಾಪದ ಜೀವಿತದಲ್ಲಿ ಜೀವಿಸಿದರೆ ಉಂಟಾಗುವ ವ್ಯತ್ಯಾಸದ ಕುರಿತು ಪೌಲನು ಬರೆದನು.[4] ಎಫೆಸದವರು ಕರ್ತನ ಆತ್ಮದಿಂದ ತುಂಬಿಸಲ್ಪಟ್ಟವರಾಗಿ, "ಕರ್ತನಿಗೆ ಸಮೀಪಪಸ್ಥರಾಗಿ

ಜೀವಿಸಬೇಕೆಂದು ಪೌಲನು ತಿಳಿಸಿದನು'' (ವಚನ 20; ಒತ್ತಿ ಹೇಳಿದ್ದು ನನ್ನದು).[5] ಥೆಸಲೋನಿಕದವರು ಸಹ ಇದೇ ಸಲಹೆಗಳನ್ನು ಹೊಂದಿದರು. ಅಲ್ಲಿ ಕೆಲವು ಸಹೋದರರು ಸೋಮಾರಿಗಳಾಗಿದ್ದರು, ಅವರ ಕುರಿತಾಗಿ ``ಅಕ್ರಮವಾಗಿ ನಡೆಯುವ ಪ್ರತಿ ಸಹೋದರನಿಗೆ ನೀವು ದೂರವಾಗಿರಬೇಕೆಂದು'' (2 ಥೆಸಲೋನಿಕ 3:6). *ನಮ್ಮ ಕರ್ತನಾದ ಯೇಸುವಿನ ಹೆಸರಿನಲ್ಲಿ* ನಿಮಗೆ ಆಜ್ಞಾಪಿಸುತ್ತೇನೆ. (ಒತ್ತಿ ಹೇಳಿದ್ದು ನನ್ನದು.)

ಕ್ರೈಸ್ತರು, ಸಭೆಯಲ್ಲಿ ಮಾಡುವ ಪ್ರತಿ ಕಾರ್ಯಕ್ಕು ಯೇಸುವಿನ ಅಧಿಕಾರವನ್ನು ಹೊಂದಿರಬೇಕು. ಎಂಬ ಹೊಸ ಒಡಂಬಡಿಕೆಯು ಗಮನ ಸೆಳೆಯುತ್ತದೆ. ಕೊಲೊಸ್ಸೆ 3:17ರಲ್ಲಿ ಸತ್ಯಗಳನ್ನು ಒಳಗೊಂಡ ಒಂದು ಪ್ರಮುಖವಾದ ವ್ಯಾಖ್ಯಾನವು ಇರುತ್ತದೆ. ಅದೇನೆಂದರೆ ಪೌಲನು, ``ನೀವು ನುಡಿಯಿಂದಾಗಲಿ ನಡೆಯಿಂದಾಗಲೀ ಏನು ಮಾಡಿದರೂ ಅದೆಲ್ಲವನ್ನು *ಕರ್ತನಾದ ಯೇಸುವಿನ ಹೆಸರಿನಲ್ಲಿಯೇ* ಮಾಡಿರಿ. ಆತನ ಮೂಲಕ ತಂದೆಯಾದ ದೇವರಿಗೆ ಕೃತಜ್ಞತಾ ಸ್ತುತಿಯನ್ನು ಸಲ್ಲಿಸಿರಿ'' (ಒತ್ತಿ ಹೇಳಿದ್ದು ನನ್ನದು).

ಯೇಸುವಿನ ಅಧಿಕಾರವನ್ನು ಒಳಗೊಂಡಿರುವ ``ಯಾವುದಾದರೂ'' ಎಂಬ NASBಯ ಗ್ರೀಕ್ ಪದ *ಪಾನ್* (``ಎಲ್ಲಾ'') ಎಂಬುದಾಗಿದೆ. ಸಭೆಯಲ್ಲಿ ಮಾಡುವ ಎಲ್ಲವನ್ನು ನಾವು ಯೇಸುವಿನ ಅಧಿಕಾರದಿಂದಲೇ ಮಾಡಬೇಕು. ಆ ಪದವನ್ನು ``ನೀವು ಮಾಡುವ ಯಾವುದೇ ಕಾರ್ಯ ಎಂಬುದಾಗಿ ತರ್ಜುಮೆ ಮಾಡಬಹುದು.'' ನಂಬಿಕೆಯಿಂದ ಅನುಸರಣೆ ಮಾಡುವ ಯಾವುದೇ ಆಚಾರವು ಯೇಸು ಕ್ರಿಸ್ತನ ಅಧಿಕಾರಕ್ಕೆ ಒಳಪಡಲ್ಪಡಬೇಕು.

ನಮ್ಮ ``ನಡೆ ನುಡಿಗಳಿಂದ'' ಮಾಡುವಂಥ ಎಲ್ಲಾ ಕಾರ್ಯಗಳು ಯೇಸುವಿನ ಅಧಿಕಾರದಿಂದಲೇ ನಡೆಯಬೇಕು. ಅದನ್ನು ಮನನ ಮಾಡುವದಕ್ಕೆ ಪೌಲನು ``ಎಲ್ಲಾ'' ಎಂಬ ಪದವನ್ನು ಒತ್ತಿ ಹೇಳಿದ್ದಾನೆ. ನಡೆನುಡಿಯಲ್ಲಿ ಮಾಡುವ ಕಾರ್ಯಗಳು, ಕರ್ತನಾದ ಯೇಸುವಿನ ನಾಮದಲ್ಲಿ ಮಾಡಬೇಕು ಎಂದು ದೃಢಿಕರಿಸಿದ್ದಾನೆ.[6]

ಕೊಲೊಸ್ಸೆ ಪತ್ರಿಕೆಯಲ್ಲಿ, ಯೇಸುವಿನ ಪ್ರಾಬಲ್ಯದಲ್ಲಿ ಉಂಟಾಗುವ ವಿಷಯಗಳನ್ನು ಪೌಲನು, ತಿಳಿಸಿದ್ದಾನೆ, ಸೃಷ್ಟಿಯಲ್ಲಿ ಮತ್ತು ಸಭೆಯಲ್ಲಿ ಕ್ರಿಸ್ತನೇ ಶಿರಸ್ಸು ಎಂದು ಸಾಮಾನ್ಯ ವಾಗಿ ಹೇಳಿದ್ದಾನೆ (ಕೊಲೊಸ್ಸೆ 1:15-20). ಇತರ ನಂಬಿಕೆಯ ಪದ್ಧತಿಗಳಲ್ಲಿ ಇರಬೇಕಾದ ಯೇಸುವಿನ ಅಧಿಕಾರದ ಕುರಿತು, ಮತ್ತು ಮಾನವರ ನಿರ್ದಿಷ್ಟವಾದ, ತತ್ವಗಳ ಹಾಗೂ ಮೋಶೆಯ ಧರ್ಮಶಾಸ್ತ್ರದ ಕುರಿತು ಹೇಳಿದ್ದಾನೆ (ಕೊಲೊಸ್ಸೆ 2:8-23). ಯೇಸುವಿನ ವಿಶೇಷ ವಾದ ದೈವತ್ವವನ್ನು ಕೊಲೊಸ್ಸೆ 2:12ರಲ್ಲಿ ವಿವರಿಸಿ, ಪೌಲನು ಕ್ರೈಸ್ತರಿಗೆ ನೆನಪು ಮಾಡುವಂತೆ ತಿಳಿಸಿದ್ದಾನೆ, ಅದೇನೆಂದರೆ ಅವರು, ದೀಕ್ಷಾಸ್ನಾನದಲ್ಲಿ ಆತನೊಂದಿಗೆ ಹೂಣಲ್ಪಟ್ಟು, ದೇವರ ಕಾರ್ಯದ ನಿಮಿತ್ತ ನಂಬಿಕೆಯಿಂದ ಕ್ರಿಸ್ತನು ತಿರುಗಿ ಎದ್ದು ಬಂದಂತೆ ಅವರನ್ನು ಎಬ್ಬಿಸಿ, ಅವರು ಬೆಳಕಿನಲ್ಲಿ ಹೊಸಬರಾಗಿ ಜೀವಿಸುವಂತೆಯೂ ಮತ್ತು ತಪ್ಪು ಪ್ರವಾದಿಗಳಿಗೆ ಸಿಲುಕದಂತೆ ಮಾಡಿದ್ದಾನೆ (ಕೊಲೊಸ್ಸೆ 3:1-11).

## ಮುಕ್ತಾಯ

ಕೊಲೊಸ್ಸೆ 3:17ರ ಪ್ರಕಾರ *ಸಕಲ* ಕಾರ್ಯಗಳು - ಆರಾಧನೆ ಇರಬಹುದು ಅಥವಾ ಬೀದಿಗಳಲ್ಲಿ ಜನರನ್ನು ಸಂಧಿಸುವ ವಿಷಯವಾಗಿರಬಹುದು - ಅವೆಲ್ಲವನ್ನು ``ಕರ್ತನಾದ ಯೇಸುವಿನ ನಾಮದಲ್ಲಿಯೇ'' ಮಾಡಬೇಕು. ನಾವು ಮಾಡುವಂಥ ಸಕಲ ಕ್ರಿಯೆಗಳಲ್ಲಿ ಯೇಸುವಿನ ಅಧಿಕಾರ ಪ್ರಚಲಿತವಾಗಿರಬೇಕು.

ಟಿಪ್ಪಣಿಗಳು

[1]ಪುರಾತನ ದಿನಗಳಲ್ಲಿ ಕ್ರೈಸ್ತರು ಮಾತ್ರ ನಂಬಿಕೆಯ ಜೀವದ ಮಾರ್ಗವನ್ನು ಬೋಧಿಸಲಿಲ್ಲ. ಹೊಸ ಜೀವಿತಕ್ಕೆ ದೀಕ್ಷಾಸ್ನಾನವು ಅವಶ್ಯ ಎಂಬುದಾಗಿ ಅವರು ಮಾತ್ರ ಹೇಳಲಿಲ್ಲ. ಯೇಸುವಿನ ಅಧಿಕಾರವು, ಅವರ ಬೋಧನೆಯನ್ನು ಮತ್ತು ದೀಕ್ಷಾಸ್ನಾನವನ್ನು ದೃಢಪಡಿಸಿತ್ತು. [2]ಆಹಾರ ಸೇವನೆಯ ಕುರಿತಾಗಿ ಮೋಶೆಯ ಧರ್ಮಶಾಸ್ತ್ರದಲ್ಲಿ ಬರೆಯಲಾಗಿದೆ, ನಂಬಿಗಸ್ತನಾದ ಯಹೂದಿಯ ತೆಗೆದುಕೊಳ್ಳುವ ಆಹಾರ ಪದ್ಧತಿಯು, ಅನ್ಯರಲ್ಲಿ ವ್ಯತ್ಯಾಸವನ್ನು ಉಂಟುಮಾಡಿತು. [3]ಅನ್ಯಭಾಷೆಯ ಪರಿಶುದ್ಧಾತ್ಮನ ವಿಶೇಷ ವರವಾಗಿತ್ತು, ಅವನು ಅಭ್ಯಾಸ ಮಾಡದ ಭಾಷೆಯಾಗಿತ್ತು. [4]ಎಫೆಸ 4:17-24ನ್ನು ನೋಡಿರಿ. ಈ ತತ್ವದ ಕುರಿತಾಗಿ 4:25-5:20ನ್ನು ವಿಶೇಷವಾಗಿ ನೋಡಿರಿ. [5]ಪ್ರಾರ್ಥನೆಯ ಕುರಿತಾದ ಪೌಲನ ಹೇಳಿಕೆಯು ಆಶ್ಚರ್ಯವಲ್ಲ. ಶಿಷ್ಯರು ದೇವರಿಗೆ ಪ್ರಾರ್ಥನೆಯನ್ನು ಆತನ ಹೆಸರಿನಲ್ಲಿ ಮಾಡಬೇಕೆಂದು ತಿಳಿಸಿದ್ದನು: “ಇದಲ್ಲದೆ ನೀವು ನನ್ನ ಹೆಸರಿನಲ್ಲಿ ಏನೇನು ಬೇಡಿಕೊಳ್ಳುವಿರೋ, ಅದನ್ನುನೆರವೇರಿಸುವೆನು; ಹೀಗೆ ಮಗನ ಮೂಲಕ ವಾಗಿ ತಂದೆಗೆ ಮಹಿಮೆ ಉಂಟಾಗುವದು. ನೀವು ನನ್ನ ಹೆಸರಿನಲ್ಲಿ ನನ್ನನ್ನು ಏನಾದರೂ ಬೇಡಿ ಕೊಂಡರೆ ಅದನ್ನು ನೆರವೇರಿಸುವೆನು” (ಯೋಹಾನ 14:13, 14). [6]ಕೊಲೊಸ್ಸೆ 3:17, ಅಪೊಸ್ತಲರಕೃತ್ಯಗಳು 4:10ಕ್ಕೆ ಸಮಾನವಾಗಿದೆ. “ಯೇಸುವಿನ ನಾಮದಲ್ಲಿ (ಅಧಿಕಾರದಲ್ಲಿ)” ಜನರು ಜೀವಿಸಬೇಕು ಎಂದು ಒತ್ತಿ ಹೇಳಲಾಗಿದೆ. ಅಪೊಸ್ತಲರ ವಾಖ್ಯಾನವು ಅನ್ಯರಿಗೆ ಸಂಬಂಧಪಟ್ಟಿರುತ್ತದೆ. ಕೊಲೊಸ್ಸೆಯು, ಕ್ರೈಸ್ತರಿಗೆ ಬರೆಯಲಾಗಿದೆ. ಕರ್ತನ ಅಧಿಕಾರಕ್ಕೆ ಎಲ್ಲರು ಒಳಪಡಬೇಕು ಎಂದು ದೇವರ ಯೋಜನೆಯಾಗಿರುತ್ತದೆ.